**2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-167/2019**

ಪಿ.ಡಬ್ಲ್ಯೂಃ- 23
ಸಿ.ಡಬ್ಲ್ಯೂಃ- 27

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರವಿಶಂಕರ್ ಸಿ. |
| ತಂದೆಯ ಹೆಸರುಃ | : | ಚೌಡಯ್ಯ ಎಸ್. |
| ವಯಸ್ಸುಃ | : | 50 ವರ್ಷ |
| ವೃತ್ತಿಃ | : | ಪಿಎಸ್ಐ, ಬಿಳಿಗೆರೆ ಪೊಲೀಸ್ ಠಾಣೆ, |
| ವಾಸಃ | : | ಮೈಸೂರು. |

**ದಿನಾಂಕಃ 28-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2016 ನವೆಂಬರ್ ನಿಂದ ಸೆಪ್ಟಂಬರ್ 2018 ರವರೆಗೆ ಹೊಳೇನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿಃ02.01.2018 ರಂದು ಹಾಸನದ ಪೊಲೀಸ್ ಕಂಟ್ರೋಲ್ ರೂಂ ನಿಂದ ಎಂ ಎಲ್ ಸಿ ಬಗ್ಗೆ ಮಾಹಿತಿ ಬಂದಿದ್ದು ಅದರಂತೆ ಠಾಣಾ ಎಎಸ್ಐ ಚಾಸಾ-26 ಅಫೀಜುಲ್ಲಾ ಶರೀಫ್ ಹಾಗೂ ನಾನು ಹಾಸನದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ತೆರಳಿ ಪೊಲೀಸ್ ಔಟ್ ಪೋಸ್ಟ್ ನಿಂದ ಎಂ ಎಲ್ ಸಿ ಯನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿದಾರರು ಗುರುತಿಸಿದ

ಎಂ ಎಲ್ ಸಿ ಯನ್ನು ನಿಪಿ-29 ಎಂದು ಗುರುತಿಸಲಾಯಿತು. ಸುಟ್ಟ ಗಾಯಗಳ ರೋಗಿಗಳಿಗೆ ಚಿಕಿತ್ಸೆ ನೀಡುವ ವಾರ್ಡ್ ನಂ.260 ಕ್ಕೆ ಭೇಟಿ ನೀಡಿ ಗಾಯಾಳು ಲಕ್ಷ್ಮಿ ಕೋಂ ಜಗದೀಶ್ ಅವರನ್ನು ವೈದ್ಯರ ಸಮಕ್ಷಮ ವಿಚಾರಣೆ ಮಾಡಿ ಗಾಯಾಳು ಲಕ್ಷ್ಮಿ ನೀಡಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಿಪಿ-28 ಗಾಯಾಳು ಲಕ್ಷ್ಮಿ ರವರ ಹೇಳಿಕೆಯನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-28(ಬಿ) ಎಂದು ಗುರುತಿಸಲಾಯಿತು. ಗಾಯಾಳುವಿನ ಗಾಯ ಸ್ಥಿತಿ ಗಂಭೀರವಾಗಿದ್ದರಿಂದ ಹಾಗೂ ಗಾಯಾಳು ಬದುಕುವ ಸಾಧ್ಯತೆ ಕಡಿಮೆ ಇದೆ ಎಂದು ವೈದ್ಯರು ತಿಳಿಸಿದ್ದರಿಂದ ಮುಂದಿನ ತನಿಖೆ ಸಂಬಂಧವಾಗಿ ಮಾನ್ಯ ತಹಶೀಲ್ದಾರ್, ಹಾಸನ ತಾಲ್ಲೂಕು ರವರಿಗೆ ಗಾಯಾಳುವಿನ ಮರಣಪೂರ್ವ ಹೇಳಿಕೆಯನ್ನು ಪಡೆದುಕೊಳ್ಳುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ ಅದರಂತೆ ಹಾಸನ ತಾಲ್ಲೂಕಿನ ಮಾನ್ಯ ತಹಶೀಲ್ದಾರ್ ರವರು ಆಸ್ಪತ್ರೆಗೆ ಭೇಟಿ ನೀಡಿ ಲಕ್ಷ್ಮಿ ರವರ ಮರಣಪೂರ್ವ ಹೇಳಿಕೆಯನ್ನು ಪಡೆಯುವ ಸಮಯದಲ್ಲಿ ಅವರೊಂದಿಗೆ ಇದ್ದು ಸಹಕರಿಸಿರುತ್ತೇನೆ. ನಂತರ ಠಾಣೆಗೆ ಹಿಂದಿರುಗಿ ಗಾಯಾಳು ಲಕ್ಷ್ಮಿ ರವರ ಹೇಳಿಕೆ ಮೇರೆಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಠಾಣಾ ಮೊಃನಂ.1/2018 ರಲ್ಲಿ ಐಪಿಸಿ ಕಲಂ. 498(ಎ) ಸಹಕಲಂ 34 ರಡಿಯಲ್ಲಿ ಪ್ರಕರಣವನ್ನು ದಾಖಲ್ಮಾಡಿಕೊಂಡಿರುತ್ತೇನೆ ಹಾಗೂ ಪ್ರ ವ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಪ್ರ ವ ವರದಿಯನ್ನು ನಿಪಿ-30 ಎಂದು, ಸಾಕ್ಷಿದಾರರ 2 ಸಹಿಗಳನ್ನು ನಿಪಿ-30(ಎ) ಹಾಗೂ (ಬಿ) ಎಂದು ಗುರುತಿಸಲಾಯಿತು.

3. ದಿಃ03.01.2018 ರಂದು ಕೃತ್ಯ ನಡೆದ ಸ್ಥಳವಾದ ಲಕ್ಷ್ಮೀಪುರ ಗ್ರಾಮಕ್ಕೆ

ಗಾಯಾಳುವಿನ ಮನೆಗೆ ಭೇಟಿ ನೀಡಿ ಪರಿಶೀಲಿಸಲಾಗಿ ಮನೆಯ ಬಾಗಿಲು ತೆರೆದಿದ್ದು ಅದೇ ಗ್ರಾಮದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ–1 ಆನಂದ್ ರವರು ಹಾಜರಿದ್ದು ಕೃತ್ಯ ನಡೆದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪಂಚರಾದ ಚಾಸಾ–15 ದೇವರಾಜ್ ಹಾಗೂ ಚಾಸಾ–16 ವಿಜಯ್ ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಮಹಜರನ್ನು ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ತಯಾರಿಸಿರುತ್ತೇನೆ. ಕೃತ್ಯ ನಡೆದ ಸ್ಥಳದಿಂದ ಸೀಮೆಎಣ್ಣೆ ಇರುವ ಒಂದು ಪ್ಲಾಸ್ಟಿಕ್ ಕ್ಯಾನ್, ಒಂದು ಭಾಗಶಃ ಸುಟ್ಟಿರುವ ಮೆರೂನ್ ಬಣ್ಣದ ನೈಟಿ, ಒಂದು ಬೆಂಕಿಪೊಟ್ಟಣವನ್ನು ವಶಕ್ಕೆ ಪಡೆದು ಪ್ರತ್ಯೇಕವಾಗಿ ಬಟ್ಟೆಯ ಚೀಲದಲ್ಲಿ ಹಾಕಿ ಅಮಾನತ್ತುಪಡಿಸಿಕೊಂಡು M ಎಂಬ ಅಕ್ಷರದಿಂದ ಸೀಲು ಮಾಡಿ ಮಹಜರಡಿಯಲ್ಲಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಮಹಜರನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದ್ದು ನಿಪಿ–1 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–1(ಡಿ) ಎಂದು ಗುರುತಿಸಲಾಯಿತು. ಸೀಲು ಮಾಡಲಾಗಿರುವ ಒಂದು ಬಟ್ಟೆಯ ಚೀಲವನ್ನು ತೆರೆಯಲಾಯಿತು. ಬಟ್ಟೆಯ ಚೀಲದಲ್ಲಿದ್ದ ಒಂದು ಪ್ಲಾಸ್ಟಿಕ್ ಕ್ಯಾನನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮುಮಾ–1 ಎಂದು ಗುರುತಿಸಲಾಯಿತು. ಸೀಲು ಮಾಡಲಾಗಿರುವ ಇನ್ನೊಂದು ಬಟ್ಟೆಯ ಚೀಲವನ್ನು ತೆರೆಯಲಾಯಿತು. ಸದರಿ ಬಟ್ಟೆಯ ಚೀಲದಲ್ಲಿರುವ ಒಂದು ಮೆರೂನ್ ಬಣ್ಣದ ನೈಟಿಯನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮುಮಾ–2 ಎಂದು ಗುರುತಿಸಲಾಯಿತು. ಸೀಲು ಮಾಡಲಾಗಿರುವ ಮತ್ತೊಂದು ಬಟ್ಟೆಯ ಚೀಲವನ್ನು ತೆರೆಯಲಾಯಿತು. ಸದರಿ ಬಟ್ಟೆಯ ಚೀಲದಲ್ಲಿರುವ ಒಂದು ಬೆಂಕಿ ಕಡ್ಡಿ ಪೊಟ್ಟಣವನ್ನು

ಮುಮಾ–3 ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಹಿಂದಿರುಗಿ ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ಮಾಲುಪಟ್ಟಿ ನಂ.1/2018 ರಲ್ಲಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಠಾಣೆಗೆ ಹಾಜರಾದ ಸಾಕ್ಷಿದಾರರಾದ ಚಾಸಾ–1 ಆನಂದ್, ಚಾಸಾ–3 ಜಯಮ್ಮ ಹಾಗೂ ಚಾಸಾ–4 ಶೋಭ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ–1 ಆನಂದ್ ನನ್ನ ಮುಂದೆ ನಿಪಿ–2 ರಂತೆ, ಚಾಸಾ–3 ಜಯಮ್ಮ ನನ್ನ ಮುಂದೆ ನಿಪಿ–4 ರಂತೆ ಹಾಗೂ ಚಾಸಾ–4 ಶೋಭ ನನ್ನ ಮುಂದೆ ನಿಪಿ–5 ರಂತೆ ಅವರ ಹೇಳಿಕೆಗಳನ್ನು ನೀಡಿರುತ್ತಾರೆ.

4. ದಿಃ08.01.2018 ರಂದು ಹಾಸನ ತಾಲ್ಲೂಕಿನ ತಹಶೀಲ್ದಾರ್ ರವರು ಹಾಜರುಪಡಿಸಿದ ಲಕ್ಷ್ಮಿ ರವರ ಮರಣಪೂರ್ವ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಲಕ್ಷ್ಮಿ ರವರ ಮರಣಪೂರ್ವ ಹೇಳಿಕೆಯನ್ನು ಪಡೆದು ಕಳುಹಿಸಿರುವ ಬಗ್ಗೆ ತಹಶೀಲ್ದಾರ್ ರವರು ಸಲ್ಲಿಸಿದ ಪತ್ರವನ್ನು ನಿಪಿ-27 ರಂತೆ ಪಡೆದುಕೊಂಡಿರುತ್ತೇನೆ. ನಿಪಿ–27 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–27(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಗಾಯಾಳು ಲಕ್ಷ್ಮಿ ರವರ ತಂದೆ ಚಾಸಾ–6 ಮುದ್ದಯ್ಯ ರವರ ಹೇಳಿಕೆಯನ್ನೂ ಸಹ ಪಡೆದುಕೊಂಡಿರುತ್ತೇನೆ.

5. ದಿಃ14.01.2018 ರಂದು ಗಾಯಾಳು ಲಕ್ಷ್ಮಿ ರವರ ತಂದೆಯಾದ ಚಾಸಾ–6 ಮುದ್ದಯ್ಯ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡಿರುತ್ತೇನೆ. ಸದರಿ ದೂರು ಇದೇ ಪ್ರಕರಣಕ್ಕೆ ಸಂಬಂಧಿಸಿದ ಮುಂದುವರಿದ ದೂರು ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಚಾಸಾ–6 ಮುದ್ದಯ್ಯರವರ

ಮುಂದುವರಿದ ದೂರನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ನಿಪಿ-6 ನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ನಿಪಿ-6 ಮುಂದುವರಿದ ದೂರಿನಲ್ಲಿ ಮುದ್ದಯ್ಯ ರವರು ಅವರ ಮಗಳಾದ ಲಕ್ಷ್ಮಿ ರವರು ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ನಂತರ ನಿಪಿ-6 ದೂರಿನ ಮಾಹಿತಿ ಮೇರೆಗೆ ಪ್ರಕರಣದಲ್ಲಿ ಭಾರತೀಯ ದಂಡ ಸಂಹಿತೆ ಕಲಂ.306 ನ್ನು ಅಳವಡಿಸಿಕೊಂಡು ತನಿಖೆ ನಡೆಸಲು ನ್ಯಾಯಾಲಯಕ್ಕೆ ಮನವಿ ಪತ್ರವನ್ನು ಸಿಬ್ಬಂದಿಯಾದ ಶ್ರೀನಿವಾಸ್ ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿದಾರರು ನ್ಯಾಯಾಲಯಕ್ಕೆ ಕಳುಹಿಸಿದ ಮನವಿ ಪತ್ರವನ್ನು ನಿಪಿ-31 ಎಂದು ಗುರುತಿಸಲಾಗಿದ್ದು ನಿಪಿ-31 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಡಬ್ಲ್ಯೂಪಿಸಿ 554 ಚಾಸಾ-24 ಸೌಭಾಗ್ಯ ರವರ ಜೊತೆ ತೆರಳಿ ಮೃತೆ ಲಕ್ಷ್ಮಿ ರವರ ಡೆತ್ ಇಂಟಿಮೇಷನ್ ಮೆಮೋವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಡೆತ್ ಇಂಟಿಮೇಷನ್ ಮೆಮೋವನ್ನು ನಿಪಿ-32 ಎಂದು ಗುರುತಿಸಲಾಯಿತು. ನಿಪಿ-32 ನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು. ನಂತರ ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರದಲ್ಲಿ ಮಧ್ಯಾಹ್ನ 1 ಗಂಟೆಯಿಂದ 3 ಗಂಟೆಯವರೆವಿಗೆ ಸಾಕ್ಷಿದಾರರಾದ ಚಾಸಾ-7 ಸವಿತ, ಚಾಸಾ-8 ರಂಗಸ್ವಾಮಿ, ಚಾಸಾ-9 ಶೇಖರ್ ರವರ ಸಮಕ್ಷಮ ಮೃತ ಲಕ್ಷ್ಮಿ ರವರ ಶವದ ಮೇಲೆ ಶವಪಂಚನಾಮೆಯನ್ನು ತಯಾರಿಸಿರುತ್ತೇನೆ. ನಿಪಿ-12

ಶವಪಂಚನಾಮೆಯನ್ನು ತಯಾರಿಸಿದ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–12(ಸಿ) ಎಂದು ಗುರುತಿಸಲಾಯಿತು. ಶವಪಂಚನಾಮೆ ಕಾಲದಲ್ಲಿ ಮೃತಳ ರಕ್ತಸಂಬಂಧಿಗಳಾದ ಚಾಸಾ–10 ಜಲನ್, ಚಾಸಾ–11 ಯೋಗೇಶ್, ಚಾಸಾ–12 ಜವರಯ್ಯ ಹಾಗೂ ಚಾಸಾ–13 ದುದ್ದಯ್ಯ ರವರ ಹೇಳಿಕೆಗಳನ್ನೂ ಸಹ ಪಡೆದುಕೊಂಡಿರುತ್ತೇನೆ. ಚಾಸಾ–10 ಜಲನ್ ನನ್ನ ಮುಂದೆ ನಿಪಿ–16 ಹಾಗೂ 17 ರಂತೆ, ಚಾಸಾ–12 ಜವರಯ್ಯ ನನ್ನ ಮುಂದೆ ನಿಪಿ–14 ರಂತೆ ಹಾಗೂ ಚಾಸಾ–13 ದುದ್ದಯ್ಯ ನನ್ನ ಮುಂದೆ ನಿಪಿ–13 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ. ನಂತರ ಕೆ ಆರ್ ಆಸ್ಪತ್ರೆಯ ವೈದ್ಯರಿಗೆ ಮೃತೆ ಲಕ್ಷ್ಮಿ ರವರ ಶವಪರೀಕ್ಷೆ ಮಾಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ ಕೆ ಆರ್ ಆಸ್ಪತ್ರೆಯ ವೈದ್ಯರು ಮಧ್ಯಾಹ್ನ 3.30 ರಿಂದ 4.30 ರವರೆಗೆ ಮೃತೆ ಲಕ್ಷ್ಮಿ ರವರ ಶವಪರೀಕ್ಷೆಯನ್ನು ಮಾಡಿರುತ್ತಾರೆ. ನಂತರ ಶವವನ್ನು ಮೃತರ ಸಂಬಂಧಿಕರಿಗೆ ಮೃತಳ ಅಂತ್ಯಕ್ರಿಯೆ ನಡೆಸಲು ನೀಡಲಾಗಿರುತ್ತದೆ

6. ದಿಃ15.01.2018 ರಂದು ಚಾಸಾ–2 ಚಂದ್ರ, ಚಾಸಾ–5 ಜಲನ್ಯ ಹಾಗೂ ಚಾಸಾ–14 ದೇವಮ್ಮ ರವರ ಹೇಳಿಕೆಗಳನ್ನೂ ಸಹ ಪಡೆದುಕೊಂಡಿರುತ್ತೇನೆ. ಚಾಸಾ–2 ಚಂದ್ರ ನನ್ನ ಮುಂದೆ ನಿಪಿ–3 ರಂತೆ, ಚಾಸಾ–5 ಜಲನ್ಯ ನನ್ನ ಮುಂದೆ ನಿಪಿ–5 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ. ದಿಃ23.01.2018 ರಂದು ಲಕ್ಷ್ಮಿ ರವರ ಜೀವಿತ ಕಾಲದಲ್ಲಿ ಹೇಳಿಕೆಗಳನ್ನು ಪಡೆದಿದ್ದ ಚಾಸಾ–1 ಆನಂದ, ಚಾಸಾ–3 ಜಯಮ್ಮ, ಚಾಸಾ–4 ಶೋಭ ರವರ ಮುಂದುವರಿದ ಹೇಳಿಕೆಗಳನ್ನೂ ಸಹ ಪಡೆದುಕೊಂಡಿರುತ್ತೇನೆ. ಅದೇ ದಿನ ಮೃತೆ ಲಕ್ಷ್ಮಿ ರವರ ತಂದೆಯಾದ ಮುದ್ದಯ್ಯ ರವರು ಠಾಣೆಗೆ ಹಾಜರಾಗಿ ಮೃತ ಲಕ್ಷ್ಮಿ ರವರ ವಿವಾಹಕ್ಕೆ

ಸಂಬಂಧಿಸಿದಂತೆ ಲಗ್ನಪತ್ರಿಕೆಯನ್ನು ಹಾಗೂ ವಿವಾಹ ಕಾಲದಲ್ಲಿ ತೆಗೆಯಲಾದ 3 ಫೋಟೋಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪಂಚರಾದ ಚಾಸಾ–17 ಹನುಮಂತರಾಜು ಹಾಗೂ ಚಾಸಾ–18 ಕುಮಾರ್ ರವರ ಸಮಕ್ಷಮ ಸಂಜೆ 5 ಗಂಟೆಯಿಂದ 6 ಗಂಟೆಯವರೆಗೆ ಅಮಾನತ್ತು ಮಹಜರ್ ತಯಾರಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಿಪಿ–7 ಅಮಾನತ್ತು ಮಹಜರ್ ತಯಾರಿಸಿದ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–7(ಡಿ) ಎಂದು ಗುರುತಿಸಲಾಯಿತು. ನಿಪಿ–7 ರಲ್ಲಿ ಅಮಾನತ್ತುಪಡಿಸಿಕೊಂಡ ಲಗ್ನಪತ್ರಿಕೆ ಹಾಗೂ ಫೋಟೋಗಳು ನಿಪಿ–8 ರಿಂದ 11 ಆಗಿರುತ್ತವೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ಮಾಲುಪಟ್ಟಿ ಸಂಖ್ಯೆ 6/2018 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ದಿಃ01.02.2018 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಅಮಾನತ್ತುಪಡಿಸಿಕೊಳ್ಳಲಾದ ಸೀಮೆಎಣ್ಣೆ ತುಂಬಿದ ಕ್ಯಾನ್, ಭಾಗಶಃ ಸುಟ್ಟಿದ್ದ ನೈಟಿ ಹಾಗೂ ಬೆಂಕಿಪೊಟ್ಟಣವನ್ನು ಸಮುಚಿತ ಮಾರ್ಗವಾಗಿ ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ. ಈ ಬಗ್ಗೆ ಸ್ವೀಕೃತಿ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ದಿಃ02.02.2018 ರಂದು ಮೃತೆ ಲಕ್ಷ್ಮಿ ರವರ ಶವಪರೀಕ್ಷಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಮೃತೆ ಲಕ್ಷ್ಮಿ ರವರ ಶವಪರೀಕ್ಷಾ ವರದಿಯನ್ನು ನಿಪಿ–33 ಎಂದು, ನಿಪಿ–33 ನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–33(ಎ) ಎಂದು ಗುರುತಿಸಲಾಯಿತು.

7. ದಿಃ13.02.2018 ರಂದು ಆರೋಪಿ–1 ಹಾಗೂ 2 ರವರು ಸತ್ರ

ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಅವರನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಮೃತೆ ಲಕ್ಷ್ಮಿ ಹಾಗೂ ಆಕೆಯ ಗಂಡನಾದ 2 ನೇ ಆರೋಪಿ ಜಗದೀಶ್ ಬಳಸುತ್ತಿದ್ದ ಮೊಬೈಲ್ ಗಳಿಗೆ ಸಂಬಂಧಿಸಿದಂತೆ ಸಿಡಿಆರ್ ಮತ್ತು ಸಿಐಎಫ್ ನೀಡುವಂತೆ ಎಸ್ ಪಿ ಮುಖಾಂತರ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ ದಿಃ16.03.2018 ರಂದು ಮೃತೆ ಲಕ್ಷ್ಮಿ ಬಳಸುತ್ತಿದ್ದ ಮೊಬೈಲ್ ನ ಸಿಡಿಆರ್ ಮತ್ತು ಸಿಐಎಫ್ ಅನ್ನು ಪರಿಶೀಲಿಸಲಾಗಿ ಸದರಿ ಮೊಬೈಲ್ ಸಂಖ್ಯೆ ಮೃತಳ ಸಂಬಂಧಿಯಾದ ಲಕ್ಷ್ಮಣ ಬಿನ್ ಗಿಡ್ಡಯ್ಯ ರವರ ಹೆಸರಿನಲ್ಲಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಚಾಸಾ–19 ಲಕ್ಷ್ಮಣ ರವರನ್ನು ವಿಚಾರಣೆ ಮಾಡಲಾಗಿ ಅವರು ಮೃತೆಯ ಸೋದರ ಸಂಬಂಧಿಯಾಗಿದ್ದು ಆಕೆಗೆ ಸಿಮ್ ಕಾರ್ಡನ್ನು ಕೊಡಿಸಿರುವ ಬಗ್ಗೆ ಹೇಳಿಕೆ ನೀಡಿರುತ್ತಾರೆ. ಚಾಸಾ–19 ರವರು ನನ್ನ ಮುಂದೆ ನಿಪಿ–22 ರಂತೆ ಹೇಳಿಕೆಯನ್ನು ನೀಡಿರುತ್ತಾರೆ. ದಿಃ05.04.2018 ರಂದು 2 ನೇ ಆರೋಪಿ ಜಗದೀಶ್ ರವರ ಮೊಬೈಲಿಗೆ ಸಂಬಂಧಿಸಿದಂತೆ ಸಿಡಿಆರ್ ಹಾಗೂ ಸಿಐಎಫ್ ಅನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ 2 ನೇ ಆರೋಪಿನದ್ದು ಎನ್ನಲಾದ ಸಿಎಎಫ್ ಫಾರಂ ಅನ್ನು ನಿಪಿ–34 ಎಂದು ಹಾಗೂ ಸಂಬಂಧಿಸಿದ ಸಿಡಿಆರ್ ಅನ್ನು ನಿಪಿ–35 ಎಂದು ಗುರುತಿಸಲಾಯಿತು. ನಿಪಿ–34 ಹಾಗೂ 35 ಕ್ಕೆ ಸಂಬಂಧಿಸಿದ ಸೆಕ್ಷನ್ 65(ಬಿ) ನ ದೃಢೀಕರಣವನ್ನು ನಿಪಿ–36 ಎಂದು ಗುರುತಿಸಲಾಯಿತು. ನಿಪಿ–36 ರಲ್ಲಿ ಅದನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–36(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಗುರುತಿಸಿದ ಮೃತೆ ಲಕ್ಷ್ಮಿ ರವರ ಸಿಡಿಆರ್ ಅನ್ನು ನಿಪಿ–37 ಎಂದು ಹಾಗೂ ನಿಪಿ–37 ಕ್ಕೆ

ಸಂಬಂಧಿಸಿದ 65(ಬಿ) ದೃಢೀಕರಣ ಪತ್ರವನ್ನು ನಿಪಿ-38 ಎಂದು ಗುರುತಿಸಲಾಯಿತು. ದಿಃ 30.07.2018 ರಂದು ವರದಿ ನೀಡುವಂತೆ ಎಫ್ ಎಸ್ ಎಲ್ ಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ದಿಃ05.09.2018 ರಂದು ಮತ್ತೊಂದು ಕೋರಿಕೆ ಪತ್ರವನ್ನು ಎಫ್ ಎಸ್ ಎಲ್ ಗೆ ಸಲ್ಲಿಸಿರುತ್ತೇನೆ. ಮೃತೆ ಲಕ್ಷ್ಮಿ ರವರ ಮೊಬೈಲ್ ನ ಸಿಎಎಫ್ ಫಾರಂ ಲಕ್ಷ್ಮಣ್ ರವರ ಹೆಸರಿನಲ್ಲಿದ್ದ ಬಗ್ಗೆ ದಾಖಲಾತಿ ನಿಪಿ-23 ಆಗಿರುತ್ತದೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ದಿಃ17.09.2018 ರಂದು ನನಗೆ ವರ್ಗಾವಣೆ ಆಗಿದ್ದು ಮುಂದಿನ ತನಿಖೆಯನ್ನು ಚಾಸಾ-28 ರವರು ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟಿ ಸವಾಲಿಗಾಗಿ ಸಮಯ ಕೋರಿದ್ದು ನೀಡಲಾಗಿರುತ್ತದೆ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.